ದಿಃ 22.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎಸ್.ಡಿ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ದಿಃ 03.02.2017 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ನಿ.ಪಿ.1 ದಾಖಲೆಯನ್ನು ಪಡೆಯಲು ಹಣ ಪಾವತಿ ಮಾಡಿದ ಬಗ್ಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ದಿಃ 17.04.2018 ರ ವ್ಯವಸ್ಥಾ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ನಿ.ಪಿ.3 ದಾಖಲೆಯನ್ನು ಪಡೆಯಲು ಹಣ ಪಾವತಿ ಮಾಡಿದ ಬಗ್ಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ಕಣಚೂರು ಗ್ರಾಮದ ಸರ್ವೆ ನಂಬರ್ 107/1 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು,
ಕಣಚೂರು ಗ್ರಾಮದ ಸರ್ವೆ ನಂಬರ್ 196/1 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು, ಕಣಚೂರು ಗ್ರಾಮದ ಸರ್ವೆ ನಂಬರ್ 195/3 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, ಕಣಚೂರು ಗ್ರಾಮದ ಸರ್ವೆ ನಂಬರ್ 142/9 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು, ಕಣಚೂರು ಗ್ರಾಮದ ಸರ್ವೆ ನಂಬರ್ 180/ಪಿ8 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.9 ಎಂದು ಗುರುತಿಸಲಾಯಿತು, ಎಂ.ಆರ್.ನಂಬರ್. ಹೆಚ್.14/2016-17 ನ್ನು ಹಾಜರು ಮಾಡಿದ್ದು ನಿ.ಪಿ.10 ಎಂದು ಗುರುತಿಸಲಾಯಿತು, ಎಂ.ಆರ್.ನಂಬರ್.12/2011-12 ರ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.11 ಎಂದು ಗುರುತಿಸಲಾಯಿತು,

ಎಂ.ಆರ್.ನಂಬರ್.ಹೆಚ್.30/2017-18 ನ್ನು ಹಾಜರು ಮಾಡಿದ್ದು ನಿ.ಪಿ.12 ಎಂದು ಗುರುತಿಸಲಾಯಿತು, ದಿಃ 12.07.2023 ರಂದು ಹಂತೂರು ಗ್ರಾಮ ಪಂಚಾಯಿತಿಯಿಂದ ನೀಡಿದ ಮಾಹಿತಿ ಹಕ್ಕಿನ ಅಡಿ ನೀಡಿದ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.13 ಎಂದು ಗುರುತಿಸಲಾಯಿತು, Property Demand details ಅನ್ನು ಹಾಜರು ಮಾಡಿದ್ದು ನಿ.ಪಿ.14 ಎಂದು ಗುರುತಿಸಲಾಯಿತು, ವಂಶವೃಕ್ಷವನ್ನು ಹಾಜರು ಮಾಡಿದ್ದು ನಿ.ಪಿ.15 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 14.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ ಪ್ರತಿವಾದಿಯರ ಪರವಾಗಿ

3. ನನ್ನ ಗಂಡನ ಹೆಸರು ರಾಜೇಂದ್ರ ಎಂದರೆ ಸರಿ. ನನ್ನ ಮದುವೆ 15 ವರ್ಷಗಳ ಹಿಂದೆ ಆಗಿತ್ತು. ನನ್ನ ಗಂಡನ ಮನೆ ಮೂಡಿಗೆರೆಯಲ್ಲಿ ಇರುತ್ತದೆ. ನಾನು ಹಾಜರು ಮಾಡಿರುವ ನಿ.ಪಿ.3 ವ್ಯವಸ್ಥಾಪನ ಪತ್ರದಲ್ಲಿ ಕಾಣಿಸಿರುವ ಎಲ್ಲಾ ಸ್ವತ್ತುಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಪಹಣಿಗಳನ್ನು ತೆಗೆಸಿದಾಗ ಏನು ತಿಳಿಯಿತೋ ಆ ಸ್ವತ್ತುಗಳನ್ನು ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ದಾವೆಯಲ್ಲಿ ತೋರಿಸಿರುವ ಸ್ವತ್ತುಗಳು ಮೊದಲು ಮಂಜೇಗೌಡರ ಮಗ ಕಲ್ಲೇಗೌಡರಿಗೆ ಸೇರಿದ್ದವು ಎಂದರೆ ಸರಿ. ಕಲ್ಲೇಗೌಡರ ನಂತರ ಅವರ ಮಗ ಸಿದ್ದೇಗೌಡರಿಗೆ ದಾವ ಸ್ವತ್ತುಗಳ ಖಾತೆ ಆಗಿದ್ದವು ಎಂದರೆ ಸರಿ. ಸಿದ್ದೇಗೌಡರು ತೀರಿಕೊಂಡ ಬಳಿಕ ಅವರ ಮಕ್ಕಳು ದಾವ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಅವರವರೇ ವಿಭಾಗ ಮಾಡಿಕೊಂಡಿರುತ್ತಾರೆ ನಮಗೆ ತಿಳಿಸಿಲ್ಲ ಎಂದು ನುಡಿಯುತ್ತಾರೆ. ನಾವು ಸಿದ್ದೇಗೌಡರ ಕುಟುಂಬಕ್ಕೆ ಸೇರದ ಕಾರಣ ನಮ್ಮನ್ನು ಆ ವಿಭಾಗ ಪತ್ರಕ್ಕೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ಸಿದ್ದೇಗೌಡರ ಮಕ್ಕಳು ಪಾಲು ವಿಭಾಗವನ್ನು ದಿಃ 23.03.2008 ರಲ್ಲಿ ಮಾಡಿಕೊಂಡಿದ್ದರು ಎಂದರೆ ಸರಿ. ಆ ವಿಭಾಗವನ್ನು ಪಂಚಾಯಿತಿದಾರರು ಸೇರಿ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರು ಕೆ.ಎಸ್. ಮಂಜುನಾಥ ಎಂದರೆ ಸರಿ. 2008 ರಲ್ಲಿ ನಾನು ಅಂತಿಮ ವರ್ಷದ ಪದವಿಯ ವಿದ್ಯಾಭ್ಯಾಸ ಮಾಡುತ್ತಿದ್ದೆ ಎಂದರೆ ಸರಿ. 2008 ರಲ್ಲಿ ನಾನು ಮೂಡಿಗೆರೆಯಲ್ಲಿ ಕಲಿಯುತ್ತಿದ್ದೆ. 2008 ರಲ್ಲಿ ನಾನು ಮತ್ತು ನನ್ನ ತಾಯಿ ನನ್ನ ತಂದೆ ಮಂಜುನಾಥ ರವರಿಂದ ದೂರ ಇದ್ದೆವು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನಾನು ನನ್ನ ತಂದೆ ಮಂಜುನಾಥ ರವರಿಂದ ದೂರ ಇದ್ದ ಕಾರಣ ನನ್ನ ತಂದೆ ಏನೆಲ್ಲಾ ವ್ಯವಹಾರ ಮಾಡುತ್ತಿದ್ದರು ಎಂದು

ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ಅವರು ತುಂಬಾ ಕುಡಿಯುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತುಂಬಾ ಮದ್ಯಪಾನ ಮಾಡುತ್ತಿದ್ದರು ಎಂಬ ಬಗ್ಗೆ ದಾಖಲೆಗಳು ನಮ್ಮ ಬಳಿ ಇಲ್ಲ. 2008 ರಲ್ಲಿ ನನ್ನ ವಿದ್ಯಾಭ್ಯಾಸಕ್ಕಾಗಿ ಹಣವ ಅವಶ್ಯಕತೆ ತುಂಬಾ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಆಸ್ತಿಗೆ ಸಂಬಂಧಿಸಿದ ವ್ಯಾಜ್ಯ ನ್ಯಾಯಾಲಯದಲ್ಲಿ ವಿಚಾರಣೆಗೆ ಇತ್ತು ಎಂದರೆ ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ